		Sri. M.Nanjundappa Sri. P.V.Venkataramanappa	Member Member
27	Dharwad	Sri. Ashik B. Yeragatti Dr. Sulochana V. Karpooramath Sri. Shankar R. Lamani Sri. S.H. Helawar Sri. Sanagappa C. Chalawadi	Chairperson Member Member Member Member
28	Chikkama galore	Vide GO No ma ma e 102 ma mbha ba 2004(bha) Bang 15-12-2007 children hone for Boys Chikamagalor and Children home for Girls Bangalore rural have been converted to Observation Home Chikamagalor and Observation Home for Girls at Bangalore rural respectively.	Hence CWC's are not functioning
29	Bangalore (R)		

1120 ಶ್ರೀ ನೆ.ಲ.ನರೇಂದ್ರ ಬಾಬು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಕ್ಕಳು ಮತ್ತು ಮಹಿಳೆಯರ ಮಾರಾಟ ಸಾಗಣೆ ತಡೆಗಾಗಿ ರಾಜ್ಯ ಕ್ರಿಯಾ ಯೋಜನೆ ರೂಪಿಸಿದ್ದು ಮಕ್ಕಳು ಮತ್ತು ಮಹಿಳೆಯರ ಸಾಗಣಿ ಕುರಿತು ಆಗಾಗ ವರದಿಗಳು ಬರುತ್ತಿದ್ದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಪೊಲೀಸ್ ಠಾಣೆಗಳಲ್ಲಿ ಮಾರಾಟ ಸಾಗಣೆಯ ಕುರಿತು ದಾಖಲಿಸಲಾದ ಪ್ರಕರಣಗಳೆಷ್ಟು? ಈ ಪೈಕಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಲಾದ ಪ್ರಕರಣಗಳೆಷ್ಟು?

ಇ) ಸಮಿತಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸಾಗಣೆ ಎಂಬ ಸಿಡಬ್ಲ್ಯೂಸಿ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಬಂದಿರುವ ಪ್ರಕರಣಗಳೆಷ್ಟು?

ಈ) ಮುಂಬಯಿ ದೆಹಲಿ ಕಲ್ಕತ್ತ ಮೊದಲಾದ ಪ್ರದೇಶಗಳಿಂದ ಈವರೆಗೆ ಕರ್ನಾಟಕಕ್ಕೆ ಪುನರ್ವಸತಿಗಾಗಿ ಕಳುಹಿಸಲಾದ ಮಕ್ಕಳೆಷ್ಟು? ವ್ಯವಸ್ಥೆಗಾಗಿ ಸರ್ಕಾರದ ಕ್ರಮವೇನು?

ಉ) ವಿವಿಧ ರಾಜ್ಯಗಳಿಂದ ದುಡಿತ, ಲೈಂಗಿಕ ಕಿರುಕುಳ ಮುಂತಾದ ಶೋಷಣೆಗೊಳಗಾಗಿ ರಾಜ್ಯಕ್ಕೆ ಬಂದಿರುವ ಎಷ್ಟು ಮಕ್ಕಳನ್ನು ರಕ್ಷಿಸಲಾಗಿದೆ? (ವಿವರ ನೀಡುವುದು)

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) 1. ಗ್ರಾಮ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾವಲು ಸಮಿತಿಗಳನ್ನು ರಚಿಸಿ ತರಬೇತಿ ನೀಡಲಾಗಿದೆ.

2. ಮಹಿಳೆಯರ ಮತ್ತು ಮಕ್ಕಳ ಮಾರಾಟ ಹಾಗೂ ಸಾಗಣೆ ಬಗ್ಗೆ ಜಾಗೃತಿ ಶಿಬಿರಗಳನ್ನು ನಡೆಸಲಾಗುತ್ತಿದೆ.

3. ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಪ್ರಚಾರ ಆಂದೋಲನ ಕಾರ್ಯಕ್ರಮದ ಮೂಲಕ ಬೀದಿ ನಾಟಕ ಬಿತ್ತಿ ಪತ್ರ ಹಾಗೂ ರಸ್ತೆ ಜಾಥಾಗಳನ್ನು ನಡೆಸಲಾಗಿರುತ್ತದೆ.

4. ತ್ರೈ ಮಾಸಿಕ ಸಭೆಗಳನ್ನು ನಡೆಸಲಾಗುತ್ತಿದೆ.

5. ಸ್ವಯಂ ಸೇವಾ ಸಂಸ್ಥೆಗಳು ಭಾಗವಹಿಸುತ್ತಿವೆ.

ಆ) 64 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುತ್ತದೆ.

ಇ) ಸಮಿತಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸಾಗಣೆ ಎಂಬ ಸಿಡಬ್ಲ್ಯೂಸಿ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಬಂದಿರುವ ಪ್ರಕರಣಗಳು 97.

ಈ) ಮುಂಬಯಿ ದೆಹಲಿ ಕಲ್ಕತ್ತ ಮೊದಲಾದ ಪ್ರದೇಶಗಳಿಂದ ಈವರೆಗೆ ಕರ್ನಾಟಕಕ್ಕೆ ಪುನರ್ವಸತಿಗಾಗಿ ಕಳುಹಿಸಲಾದ ಮಕ್ಕಳು 36.

ರಾಜ್ಯಕ್ಕೆ ಬಂದ ಮಕ್ಕಳ ಪೋಷಕರನ್ನು ಪತ್ತೆ ಮಾಡಿ ಅವರವರ ವಶಕ್ಕೆ ಬಿಡಲಾಗಿದೆ. ಪೋಷಕರು ಪತ್ತೆ ಆಗದಿರುವ ಸಂದರ್ಭಗಳಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ದಾಖಲಿಸಲಾಗಿದೆ.

ಉ) ಬಾಲ ಕಾರ್ಮಿಕರು 90 ಹಾಗೂ ಲೈಂಗಿಕ ಕಿರುಕುಳಕ್ಕೊಳಗಾಗಿರುವ 32 ಮಕ್ಕಳನ್ನು ರಕ್ಷಿಸಲಾಗಿದೆ.

137 ಶ್ರೀ ಸುರೇಶಗೌಡ, : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನ ಸಣ್ಣ ಹಿಡುವಳಿ ರೈತ ಕುಟುಂಬದವರಿಗೆ ಪ್ರಸಕ್ತ ಸಾಲಿನಲ್ಲಿ ನೀಡಲಾಗುತ್ತಿರುವ ಸಾವಿರ ರೂಪಾಯಿಗಳ ಸಹಾಯ ಧನಕ್ಕೆ ಗುರುತಿಸಲಾಗಿರುವ ರೈತರೆಷ್ಟು;

ಆ) ಈವರೆವಿಗೂ ಎಷ್ಟು ರೈತರಿಗೆ ಸಹಾಯ ಧನ ನೀಡಲಾಗಿದೆ;

ಇ) ಹಾಗಿದ್ದಲ್ಲಿ, ಎಲ್ಲಾ ಅರ್ಹ ರೈತರಿಗೆ ಎಷ್ಟು ದಿವಸದೊಳಗೆ ಸಹಾಯ ಧನ ಒದಗಿಸಲಾಗುವುದು?

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) 21030 ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳನ್ನು ಗುರುತಿಸಲಾಗಿದೆ.

ಆ) ಇದುವರೆಗೆ 15,276 ರೈತರಿಗೆ ಸಹಾಯಧನ ನೀಡಲಾಗಿದೆ.

ಇ) 2009ರ ಮಾರ್ಚ್ ಅಂತ್ಯದೊಳಗೆ ಎಲ್ಲಾ ಅರ್ಹ ರೈತರಿಗೆ ಸಹಾಯಧನ ಒದಗಿಸಲಾಗುವುದು.

112 ಶ್ರೀ ಸಂಗಪ್ಪಂಗಿ ಎಸ್ : ಮಾನ್ಯ ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಕ್ರೀಡೆಗಳ ಅಂಗವಾಗಿ ನಿರ್ಮಾಣವಾದ ಒಳಾಂಗಣ ಕ್ರೀಡಾಂಗಣವನ್ನು ಇದುವರೆಗೂ ಯಾವ ಯಾವ ಕ್ರೀಡಾ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ. (ವಿವರಣೆ ನೀಡುವುದು)

ಆ) ಈ ಕ್ರೀಡಾಂಗಣಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;